OS 21/2019

PW-1

ದಿನಾಂಕಃ **15.12.2023** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 5 ಮತ್ತು 6 ರವರ ಪರ ಶ್ರೀ. ಡಿ ವಿ ಎಸ್ ವಕೀಲರಿಂದಃ**

ಗುಡ್ಡಂ ಪಾತಪ್ಪ ಮತ್ತು ಅವರ ಹೆಂಡತಿ ನಂಜಮ್ಮನವರನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಅವರು ಯಾವಾಗ ತೀರಿಕೊಂಡಿದ್ದಾರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿಲ್ಲ ಸುಮಾರು 60 ರಿಂದ 70 ವರ್ಷಗಳ ಹಿಂದೆ ತೀರಿಕೊಡಿರುವುದಾಗಿ ಹೇಳುತ್ತಾರೆ ಎಂದು ಉತ್ತರಿಸುತ್ತಾರೆ. ಗುಡ್ಡಂ ಪಾತಪ್ಪ ಮತ್ತು ನಂಜಮ್ಮನವರಿಗೆ ಲಿಂಗಪ್ಪ ಎಂಬ ಒಬ್ಬರೇ ಮಗ, ಅವರನ್ನು ನಾನು ನೋಡಿರುವುದಿಲ್ಲ. ಅವರು ತೀರಿಕೊಂಡು ಸುಮಾರು 55 ರಿಂದ 60 ವರ್ಷಗಳಾಗಿರುತ್ತವೆ. ಲಿಂಗಪ್ಪನವರಿಗೆ ನಾರಾಯಣಮ್ಮ ಒಬ್ಬಳೇ ಮಗಳು, ಅವರೇ ನಮ್ಮ ತಾಯಿ. ಲಿಂಗಪ್ಪ ರವರಿಗೆ ಒಬ್ಬಳೇ ಮಗಳು ಎಂದು ತೋರಿಸಲು ಅವರ ವಂಶವೃಕ್ಷವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ.

ಪೆದ್ದ ಹಮಂತಪ್ಪ ಎಂದರೆ ಯಾರು ಎಂದರೆ ಸಾಕ್ಷಿ ನನ್ನ ತಾತ ಲಿಂಗಪ್ಪನವರ ತಂದೆ ಗುಡ್ಡಂ ಪಾತಪ್ಪನವರ ತಮ್ಮ ಎಂದು ಉತ್ತರಿಸುತ್ತಾರೆ. ಅವರನ್ನು ನಾನು ನೋಡಿರುವುದಿಲ್ಲ. ಅವರು ತೀರಿಕೊಂಡು ಸುಮಾರು 50 ರಿಂದ 60 ವರ್ಷಗಳಾಗಿರುತ್ತವೆ. ಚಿಕ್ಕಹನುಮಂತಪ್ಪ ರವರು ಯಾರು ಎಂದರೆ ಸಾಕ್ಷಿ ನಂಜಪ್ಪನವರ ಮಗ ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪ ನಿಮಗೆ ಯಾವ ರೀತಿ ಸಂಬಂಧ ಎಂದರೆ ಸಾಕ್ಷಿ ನನ್ನ ತಾಯಿ ಕಡೆಯಿಂದ ನನಗೆ ತಾತ ಆಗಬೇಕು, ಸದರಿ ಚಿಕ್ಕ ಹನುಮಂತಪ್ಪ ನವರನ್ನು ನಾನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪ ನವರಿಗೆ ನರಸಮ್ಮ ಎಂಬ ಒಬ್ಬಳೇ ಮಗಳು. ನರಸಮ್ಮ ಯಾವಾಗ ಮದುವೆ ಆಗಿರುತ್ತಾರೆ ಎಂಬುದು ನನಗೆ

ಗೊತ್ತಿಲ್ಲ. ನರಸಮ್ಮ ಮತ್ತು ಆಕೆಯ ಗಂಡ ಯಾವಾಗ ತೀರಿಕೊಂಡಿದ್ದಾರೆ ಗೊತ್ತಾ ಎಂದರೆ ಸಾಕ್ಷಿ ನಿಖರವಾಗಿ ಗೊತ್ತಿಲ್ಲ, ಅಂದಾಜು 45 ರಿಂದ 55 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನರಸಮ್ಮನವರ ಗಂಡ ನಾಗರೆಡ್ಡಿ ಅವರ ಮೊದಲನೇ ಹೆಂಡತಿಯ ಹೆಸರು ಏನು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅವರ ಮೊದಲನೇ ಹೆಂಡತಿಗೆ ಮಕ್ಕಳು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಗುಡ್ಡಂ ಪಾತಪ್ಪ ಮತ್ತು ಚಿಕ್ಕಹನುಮಂತಪ್ಪ ರವರಿಗೆ ಯಾವ ಯಾವ ಆಸ್ತಿಗಳು ಇದ್ದವು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತು ಎಂದು ಉತ್ತರಿಸುತ್ತಾರೆ. ಅವುಗಳು ಸರ್ವೆ ನಂಃ 331 ಅದರಲ್ಲಿ ಕೆಲವು ಪೋಡುಗಳಿದ್ದು, ಸರ್ವೆ ನಂಃ 331/1, 331/2 ಬಿ1, 331/4, 331/8 ಮತ್ತು ಸರ್ವೆ ನಂಃ 332, ಸದರಿ 332 ರಲ್ಲಿಯೂ ಕೆಲವು ಪೋಡುಗಳಾಗಿದ್ದು ಅವು ಸರ್ವೆ ನಂಃ 332/2 ಎ 1, 332/2 ಎ 3, 332/2 ಬಿ, 332/ಸಿ. ಸರ್ವೆ ನಂಃ 411 ಇದರಲ್ಲಿ ಪೋಡಾಗಿದ್ದು ಸರ್ವೆ ನಂಃ 411/6 ಹಾಗೂ ಸರ್ವೆ ನಂಃ 230, ಇದರಲ್ಲಿ ಪೋಡಾಗಿ 230/9 . ಈ ಮೇಲೆ ಹೇಳಿದ ಎಲ್ಲಾ ಸರ್ವೆ ನಂಬರ್ ಜಮೀನುಗಳು ಸೇರಿ ಒಟ್ಟು 54 ರಿಂದ 55 ಎಕರೆ ವಿಸ್ತೀರ್ಣ ಇರುತ್ತದೆ. ಈ ಎಲ್ಲಾ ಸರ್ವೆ ನಂಬರ್ ಜಮೀನುಗಳ ಚೆಕ್ ಬಂದಿ ಹೇಳಲು ಆಗುತ್ತದೆ.

ಗುಡ್ಡಂ ಪಾತಪ್ಪ ಮತ್ತು ಚಿಕ್ಕಹನುಮಂತಪ್ಪ ರವರು ಯಾವಾಗ ವಿಭಾಗ ಮಾಡಿಕೊಂಡರು ಎಂದರೆ ಸಾಕ್ಷಿ ಯಾವಾಗ ಎಂದು ಗೊತ್ತಿಲ್ಲ ಆದರೆ ಮಾತುಕತೆ ಮೂಲಕ ವಿಭಾಗ ಆಗಿರುತ್ತಾರೆ ಎಂದು ಉತ್ತರಿಸುತ್ತಾರೆ. ಮಾತುಕತೆ ಮೂಲಕ ಮಾಡಿಕೊಂಡಿದ್ದಾರೆ ಎಂದು ಹೇಳುವ ವಿಭಾಗದಲ್ಲಿ ಗುಡ್ಡಂ ಪಾತಪ್ಪನವರಿಗೆ ಯಾವ ಯಾವ ಸರ್ವೆ ನಂಬರ್ ಜಮೀನುಗಳು ಅವರ ಭಾಗಕ್ಕೆ ಬಂದಿವೆ ಎಂದರೆ ಸಾಕ್ಷಿ ಅದು ಗೊತ್ತಿಲ್ಲ ಆದರೆ ಈಗ ಅವರ ಹೆಸರಿನಲ್ಲಿ ಇರುವ ಜಮೀನುಗಳ ಸರ್ವೆ ನಂಬರ ನನಗೆ ಗೊತ್ತು ಎಂದು ಉತ್ತರಿಸುತ್ತಾರೆ. ಆ ವಿಭಾಗದ ಪ್ರಕಾರ ಅವರಿಬ್ಬರ ಹೆಸರಿನಲ್ಲಿ ಮ್ಯುಟೇಶನ್

ಆಗಿರುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅದು ಗೊತ್ತಿಲ್ಲ, ಮಾತುಕತೆಯಲ್ಲಿ ವಿಭಾಗ ಆಗಿದ್ದಾರೆ ಎಂದು ಉತ್ತರಿಸುತ್ತಾರೆ.

ಚಿಕ್ಕಹನುಮಂತಪ್ಪನ ಹೆಂಡತಿ ಹನುಮಕ್ಕನನ್ನು ನಾನು ನೋಡಿರುವುದಿಲ್ಲ. ಸದರಿ ಹನುಮಕ್ಕ ಏನಾದರೂ ಆಸ್ತಿಗಳನ್ನು ಸಂಪಾದನೆ ಮಾಡಿದ್ದರಾ ಎಂದರೆ ಸಾಕ್ಷಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪ ಅವರ ಮಗಳಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದು ಹೇಳಿದ್ದಿರಿ ಯಾವ ವರ್ಷದಲ್ಲಿ ಎಂದರೆ ಸಾಕ್ಷಿ 1950 ರಲ್ಲಿ ಎಂದು ಉತ್ತರಿಸುತ್ತಾರೆ. ಆ ದಾನಪತ್ರದಲ್ಲಿ ಯಾವ ಯಾವ ಸರ್ವೆ ನಂಬರುಗಳು ಇವೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ಈ ಮೇಲೆ ಹೇಳಿದ ಎಲ್ಲಾ ಸರ್ವೆ ನಂಬರುಗಳು ನಮೂದು ಇವೆ, ಜೊತೆಗೆ 336 ಮತ್ತು ಇನ್ನೂ ಬೇರೆ ನಂಬರುಗಳು ಇವೆ ಎಂದು ಉತ್ತರಿಸುತ್ತಾರೆ. ದಾನಪತ್ರವನ್ನು ನಾನು ನೋಡಿದ್ದೇನೆ, ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. 1950 ರಲ್ಲಿ ಚಿಕ್ಕಹನುಮಂತಪ್ಪನ ಮಗಳಿಗೆ ದಾನಪತ್ರ ಆಗಿದೆ ಎಂದು ಹೇಳುವ ಜಮೀನುಗಳು ಆ ಸಮಯದಲ್ಲಿ ಚಿಕ್ಕಹನುಮಂತಪ್ಪನವರ ಹೆಸರಿಗೆ ಖಾತೆ ಪಹಣಿ ಆಗಿದ್ದವಾ ಎಂದರೆ ಸಾಕ್ಷಿ ಆಗಿರಬಹುದೇನೋ ಎಂದು ಉತ್ತರಿಸುತ್ತಾರೆ. ಆ ದಾನಪತ್ರ ಪ್ರಕಾರ ನರಸಮ್ಮನವರ ಹೆಸರಿಗೆ ಮ್ಯುಟೇಶನ್ ಆಗಿದೆ ಅದನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ನರಸಮ್ಮ ಬೇರೆ ಯಾರಿಗಾದರೂ ಜಮೀನು ಜಮೀನು ಮಾರಾಟ ಮಾಡಿದ್ದಾರಾ ಎಂದರೆ ಸಾಕ್ಷಿ ಇವುಗಳನ್ನು ಬಿಟ್ಟು ಮಾರಾಟ ಮಾಡಿರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನರಸಮ್ಮನವರನ್ನು ನಾನು ನೋಡಿರುವುದಿಲ್ಲ. 1950 ನೇ ಇಸ್ವೀಯಲ್ಲಿ ನರಸಮ್ಮನವರಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ತಿಳಿದುಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನರಸಮ್ಮನವರ ಯಜಮಾನರು ಯಾವಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನರಸಮ್ಮ ಮತ್ತು ಅವರ ಗಂಡ ತೀರಿಕೊಂಡ ನಂತರ ಅವರ ಹೆಸರಿನ ಜಮೀನುಗಳು ಯಾರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿಯೇ ಇವೆ ಎಂದು ಉತ್ತರಿಸುತ್ತಾರೆ.

ನೀವೇನಾದರೂ ನಿಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅರ್ಜಿ ಸಲ್ಲಿಸಿದ್ದೆನು ಅದಕ್ಕೆ ತಕರಾರು ಮಾಡಿದ್ದರಿಂದ ಈ ಕೇಸ್ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ನರಸಮ್ಮ ಮತ್ತು ಅವರ ಗಂಡನ ತೀರಿಕೊಂಡ ನಂತರ ಸುಮಾರು 50 ವರ್ಷಗಳಿಂದ ಅವರ ಹೆಸರಿನಲ್ಲಿಯೇ ಜಮೀನುಗಳು ಬರುತ್ತಿದ್ದು ನೀವು ಯಾರು ನಿಮ್ಮ ಹೆಸರಿಗೆ ಮಾಡಿಕೊಳ್ಳಲು ಅರ್ಜಿ ಕೊಟ್ಟಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ತಾಯಿ ಅಮಾಯಕರು ಅವರಿಗೆ ಏನು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವೇನಾದರೂ ನರಸಮ್ಮನವರ ಹೆಸರಿನಲ್ಲಿ ಇರುವ ಜಮೀನುಗಳು ಬಾಬ್ತು ಕಂದಾಯ ಪಾವತಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂಃ 332/2 ಬಿ ದಾವಾ ಅನುಸೂಚಿ 7 ನೇ ಸ್ವತ್ತು ನರಸಿಂಹಪ್ಪ ಬಿನ್ ನಂಜಪ್ಪನವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಜಂಟೀ ಬರುತ್ತಿದೆ ಆದರೆ ಅವರಿಗೂ ಈ ಜಮೀನಿಗೂ ಸಂಬಂಧವೇನು ಇಲ್ಲ, ಅವರು ಅದನ್ನು ಒಪ್ಪಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಅವರ ಹೆಸರಿನಲ್ಲಿ ಜಂಟೀ ಬರುತ್ತಿರುವ ವಿಚಾರ 2018 19 ನೇ ಸಾಲಿನಲ್ಲಿ ನಮ್ಮ ಹೆಸರಿಗೆ ಮಾಡಿಕೊಳ್ಳಲು ಅರ್ಜಿ ಕೊಡಲು ವಿಚಾರಿಸಿದ ವೇಳೆ ಗೊತ್ತಾಯಿತು. 2018 19 ನೇ ಸಾಲಿನಲ್ಲಿ ಅರ್ಜಿ ಕೊಟ್ಟ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಕೊಟ್ಟಿದ್ದೇನೆ.

ಗುಡ್ಡಂ ಪಾತಪ್ಪನವರ ತಂದೆಯ ಹೆಸರು ನಂಜಪ್ಪ. ಇದನ್ನು ತೋರಿಸಲು ನ್ಯಾಯಾಲಯದಲ್ಲಿ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಃ ಮುಂದುವರೆದು ವಂಶವೃಕ್ಷವನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಾವಾ ಹಾಕಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಈ ದಾವಾ ದಾಖಲಿಸಲು ಏನು ಕಾರಣ ಎಂದರೆ ಸಾಕ್ಷಿ ನನ್ನ ತಾತ ಮತ್ತು ಅಜ್ಜಿಯ ಹೆಸರಿನಲ್ಲಿ ಜಮೀನುಗಳು ಬರುತ್ತಿದ್ದುದರಿಂದ ಅವುಗಳ ಖಾತಾ ಪಹಣಿಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಳ್ಳಲು ಮತ್ತು ಹೆಸರು ತಿದ್ದುಪಡಿ ಮಾಡಲು ಅರ್ಜಿಸಲ್ಲಿಸಿದ್ದೇನೆ, ಆಗ ಎದುರುದಾರರು ತಕರಾರು ಮಾಡಿದ ಕಾರಣ ಈ ದಾವೆ ಹಾಕಿರುತ್ತೇನೆ ಎಂದು ಉತ್ತರಿಸುತ್ತಾರೆ.

ದಾವಾ ಜಮೀನುಗಳು ಪಕ್ಕದಲ್ಲಿ ಪ್ರತಿವಾದಿಯರಿಗೆ ಸೇರಿದ ಜಮೀನುಗಳು ಇವೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಜಮೀನುಗಳ ಬಳಿ ನೀವು ಹೋಗಿ ಎಷ್ಟು ವರ್ಷಗಳಾಗಿರುತ್ತವೆ ಎಂದರೆ ಸಾಕ್ಷಿ ನಮ್ಮ ತಂದೆ ತಾಯಿ ಮತ್ತು ನನ್ನ ತಾಯಿಯ ತಾಯಿ ಎಲ್ಲರೂ ಹೋಗಿ ಆ ಜಮೀನಿನಲ್ಲಿ ಕೆಲಸ ಮಾಡುತ್ತಾರೆ ನಾನು ಆಗಾಗ ಹೋಗಿ ಬರುತ್ತೇನೆ ಎಂದು ಉತ್ತರಿಸುತ್ತಾರೆ. ದಾವಾ ಜಮೀನುಗಳು ನಾಗೇನಹಳ್ಳಿ ಗ್ರಾಮದಲ್ಲಿ ಇರುತ್ತವೆ. ನಾನು ರೆಡ್ಡಿವಾರಹಳ್ಳಿಯಲ್ಲಿ ವಾಸವಾಗಿದ್ದೇನೆ. ನಮ್ಮ ಊರಾದ ರೆಡ್ಡಿವಾರಹಳ್ಳಿಯಿಂದ ನಾಗೇನಹಳ್ಳಿಗೆ ಸುಮಾರು 3 ಕಿ.ಮೀ ದೂರು ಆಗುತ್ತದೆ. ದಾವಾ ಜಮೀನುಗಳಲ್ಲಿ ನಿಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ನಾರಾಯಣಮ್ಮನವರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡಲು ನಿಮಗೆ ತೊಂದರೆ ಏನು ಇಲ್ಲ ಎಂದರೆ ಸಾಕ್ಷಿ ಸಾಕ್ಷಿ ಮಾಡಬಹುದು ಆದರೆ ಅವರಿಗೆ ಕಿವಿ ಕೇಳಿಸುವುದಿಲ್ಲ, ಕಣ್ಣು ಕಾಣಿಸುವುದಿಲ್ಲ, ಅನಾರೋಗ್ಯವಿದೆ ಎಂದು ಉತ್ತರಿಸುತ್ತಾರೆ. ನಾನು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.